# ಸ್ವಾಮಿ ವಿವೇಕಾನಂದರು, ಯುವಕರಿಗಾಗಿ

ಸ್ವಾಮಿ ಧರ್ಮವ್ರತಾನಂದ

ಈ ಬಾರಿ 'ಯುವಜಾಗೃತಿ'ಯಲ್ಲಿ ಸ್ವಾಮಿ ವಿವೇಕಾನಂದರು ಯುವಕರಿಗಾಗಿ ನೀಡಿದ ಆದರ್ಶ, ಧ್ಯೇಯಗಳನ್ನು ಪ್ರಾಯೋಗಿಕವಾಗಿಸಿ ಬದುಕುವ ರೀತಿಯನ್ನು ತೋರಿಸಿಕೊಡಲಾಗಿದೆ. ಲೇಖಕರು ಉತ್ತಮ ವಾಗ್ಮಿಗಳು, ಬರಹಗಾರರು. ಪ್ರಸ್ತುತ ಅವರು ಬೆಂಗಳೂರು ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರತಿಯೊಬ್ಬ ಮನುಷ್ಯನೂ ಸಾಮಾನ್ಯವಾಗಿ ಎರಡು ಬಗೆಯ ಜೀವನ ಮುಖವನ್ನು ಹೊಂದಿರುತ್ತಾನೆ. ಒಂದು ಬಾಹ್ಯ ಮತ್ತೊಂದು ಆಂತರಿಕವಾದುದು. ಬಹಳಷ್ಟು ಜನ ಬಾಹ್ಯ ಜೀವನಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ. ರೂಪ, ಬಟ್ಟೆ, ಅಧಿಕಾರ, ಅಂತಸ್ತು, ಹೆಸರು, ಕೀರ್ತಿ, ಬಂಗಲೆ ಇತ್ಯಾದಿತ್ಯಾದಿ. ಆದರೆ ನಿಜವಾದ ಜೀವನ ಆಂತರಿಕವಾದುದಕ್ಕೆ ನಾವು ಹೆಚ್ಚಿನ ಮಹತ್ವ ನೀಡುತ್ತಿಲ್ಲ. ನಾವು ನಮ್ಮ ಮೊಬೈಲಿನ ಕಾಲ್‌ಗಳಲ್ಲಿ ಕಳೆವ ಸಮಯದ ಅರ್ಧದಷ್ಟನ್ನಾದರೂ ನಮ್ಮ ಆತ್ಮಾವಲೋಕನಕ್ಕೆ ನೀಡಿದರೆ ಅದು ನಮ್ಮ ಜೀವನವನ್ನೆಷ್ಟೋ ಉತ್ತಮಗೊಳಿಸುತ್ತಿತ್ತೇನೋ. ವ್ಯಕ್ತಿತ್ವಕ್ಕೆ ಏಕೆ ಇಷ್ಟೊಂದು ಗಮನ ಅಥವಾ ಬೆಲೆ ಕೊಡಬೇಕು ಎಂಬುದನ್ನು ಸ್ವಾಮಿ ವಿವೇಕಾನಂದರ ಜೀವನದಲ್ಲಿ ನಡೆದಿದೆ ಎಂದು ಹೇಳುವ ಒಂದು ಘಟನೆಯ ಮುಖಾಂತರ ನೋಡೋಣ. ಅವರು ಮೊದಲ ಬಾರಿಗೆ ಅಮೇರಿಕಾಗೆ ಹೋದಾಗ ಅಲ್ಲಿ ಮೊದಲ ದಿನಗಳಲ್ಲಿ, ಒಮ್ಮೆ ಯಾವುದೇ ರೀತಿಯ ಸಹಾಯವಿಲ್ಲದೆ, ಸಾಮಾನ್ಯ ಮನುಷ್ಯನಂತೆ ಅಸಹಾಯಕರಾಗಿ ಕುಳಿತಿದ್ದಾಗ ಮಹಿಳೆಯೊಬ್ಬಳು ಅವರಿಗೆ ಅನ್ನಾಹಾರಾದಿ ವಸತಿಯನ್ನು ವ್ಯವಸ್ಥೆಮಾಡಿದಳು. ಸ್ವಾಮೀಜಿಯವರ ಬಳಿ ಚಳಿಗಾಲದ ಮತ್ತು ಆ ದೇಶಕ್ಕೆ ತಕ್ಕುದಾದ ಉಡುಪುಗಳಿಲ್ಲದ್ದನ್ನು ಕಂಡು, ಅವಳು ಸ್ವಾಮೀಜಿಗೆ ಸೂಕ್ತವಾದ ಉಡುಪನ್ನು ಧರಿಸಲು ನೀಡಿದಳು. ನಂತರ ಸ್ವಾಮೀಜಿಯವರನ್ನು ಆ ಉಡುಪಿನಲ್ಲಿ ಕಂಡು, "ಸ್ವಾಮೀಜಿ, ಈಗ ನೀವು ಸಭ್ಯರಂತೆ (Gentlemen) ಕಾಣುತ್ತಿದ್ದೀರಿ" ಎಂದಳು. ಸ್ವಾಮೀಜಿ ಹೇಳಿದರು, "ಅಮ್ಮಾ, ನಿಮ್ಮ ಈ ದೇಶದಲ್ಲಿ ಟೈಲರ್ ಒಬ್ಬರನ್ನು ಸಭ್ಯರನ್ನಾಗಿ ಮಾಡುತ್ತಾನೆ, ನಮ್ಮ ದೇಶದಲ್ಲಿ ವ್ಯಕ್ತಿತ್ವ ಒಬ್ಬರನ್ನು ಸಭ್ಯರನ್ನಾಗಿಸುತ್ತದೆ." ಸಂಪತ್ತು, ಆರೋಗ್ಯ ಕಳೆದು ಹೋದರೆ ಮರಳಿ ಪಡೆಯಬಹುದು, ಆದರೆ ವ್ಯಕ್ತಿತ್ವ ನಾಶವಾದರೆ ಮತ್ತೆ ತಿರುಗಿ ಪಡೆಯಲು ಬಾರದು ಅಲ್ಲವೆ? ಈ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕಾದವರು ನಾವೇ. ಇದು ಹೊರಗಿನಿಂದ ಬರದು.

### ಉದ್ಧರೇತ್ ಆತ್ಮನಾತ್ಮಾನಂ

ಒಂದು ಊರಿನಲ್ಲಿ ಒಬ್ಬಳು ಬಡವಿಧವೆ ತನ್ನ ಒಬ್ಬನೇ ಮಗನೊಂದಿಗೆ ಬಡತನದಲ್ಲಿ ಬದುಕುತ್ತಿದ್ದಾಳೆ. ಅವಳ ಸರ್ವಸ್ವವೂ ಆ ತನ್ನ ೭ ವರ್ಷದ ಮಗ. ಜೀವನಾಧಾರಕ್ಕೆ ಒಂದೆರಡು ದನಕರುಗಳು. ಪ್ರತಿದಿನ ಆ ಮಗು ತಮ್ಮ ದನಕರುಗಳೊಂದಿಗೆ ಪಕ್ಕದ



ನದಿಯ ದಡಕ್ಕೆ ಮೇಯಿಸಲು ಹೋಗುತ್ತಿತ್ತು. ನದಿಯ ಆಚೆ ಒಂದು ಗುರುಕುಲ. ಅಲ್ಲಿ ನಡೆಯುತ್ತಿದ್ದ ಪಾಠ, ಪ್ರವಚನ ಮತ್ತು ಶಿಷ್ಯರು ಗುರುವಿಗೆ ಸಲ್ಲಿಸುತ್ತಿದ್ದ ಸೇವೆ ಎಲ್ಲವನ್ನೂ ಈ ಮಗುವು ನೋಡುತ್ತಿತ್ತು. ತಾನೂ ಕೂಡ ವಿದ್ಯೆಯನ್ನು ಗಳಿಸಲು ಬಯಸುತ್ತಿತ್ತು. ಆದರೆ ತಾಯಿ ಮತ್ತು ತಮ್ಮ ಬಡತನ ಅದರ ಆಸೆಗೆ ತಣ್ಣೀರು ಎರಚಿತ್ತು. ಆದರೂ ಹಲವು ಬಾರಿ ತಾಯಿಯ ಬಳಿ ಕೇಳಿ ನಕಾರಾತ್ಮಕ ಉತ್ತರದಿಂದ ನೊಂದಿತ್ತು. ಆದರೆ ಒಂದು ದಿನ ತಾಯಿಯನ್ನು ಕಾಡಿಬೇಡಿ ಅತ್ತಾಗ, ಬಡತನದಲ್ಲಿ ಹಾಗೂ ತನ್ನ ಕಡೆಯ ಕಾಲದಲ್ಲಿ ತನಗೆ ಯಾರೂ ಇರದಂತಾದರೆ ಎಂಬ ಕೊರಗನ್ನು ಮರೆತು ಮಗನನ್ನು ಹರಸಿ ಕಳುಹಿಸಿದಳು.

ಮಗು ಆನಂದದಿಂದ ಗುರುಕುಲಕ್ಕೆ ಬಂದು ಗುರುಗಳಿಗೆ ನಮಸ್ಕರಿಸಿ, ತನಗೆ ವಿದ್ಯಾದಾನ ಮಾಡಬೇಕೆಂದು ಕೇಳಿಕೊಂಡಿತು. ಆಗ ಆ ಗುರುವು ದಿನವೂ ತಾನು ನೋಡುತ್ತಿದ್ದ ಈ ದನಗಾಹಿ ಇಂದು ವಿದ್ಯಾರ್ಜನೆಗೆ ಬಂದದ್ದನ್ನು ಕಂಡು, "ಮನೆಗೆ ಹೋಗಿ ತಾಯಿಗೆ ಸಹಾಯಕನಾಗಿ ಬದುಕು. ನಿನಗೆ ವಿದ್ಯೆಯು ತಲೆಗೆ ಹತ್ತದು" ಎಂದ. ಆಗ ತನ್ನ ವಿಧಿಯನ್ನು ಹಳಿಯುತ್ತಾ ಮಗು ಅಲ್ಲಿಯೇ ಅಳುತ್ತಾ ನಿಂತಿತು. ಆ ಗುರು ಆ ಮಗುವನ್ನು ಮತ್ತೆ ಮನೆ ಹೋಗಲು ಹೇಳಿದಾಗಲೂ ಆ ಮಗು ಹೋಗದಿದ್ದುದನ್ನು

ಕಂಡು, ''ನೋಡು, ನಿನ್ನ ಕೈಯನ್ನು ತೋರಿಸು'' ಎಂದು ಅದರ ಕೈಯನ್ನು ನೋಡುವವನಂತೆ ಮಾಡಿ ಹೇಳಿದ, ''ನಿನ್ನ ಕೈಯಲ್ಲಿ ವಿದ್ಯಾರೇಖೆ ಇಲ್ಲ. ನಿನಗೆ ಈ ಜನ್ಮದಲ್ಲಿ ವಿದ್ಯೆಯಿಲ್ಲ'' ಎಂದು ಹೇಳಿದ. ಅಳುತ್ತಾ ಮಗು ನಾಲ್ಕು ಹೆಜ್ಜೆ ಹೋಗಿದ್ದು ನಂತರ ತಿರುಗಿ ಬಂದು, ''ಗುರುಗಳೇ, ನಿಮ್ಮ ಕೈಯಲ್ಲಿ ಆ ರೇಖೆಯಿದೆಯೇ, ದಯವಿಟ್ಟು ನನಗೊಮ್ಮೆ ತೋರಿಸಿ'' ಎಂದಾಗ ಗುರು ತಬ್ಬಿಬ್ಬಾದರೂ ಯಾವುದೋ ಒಂದು ರೇಖೆಯನ್ನು ತೋರಿಸಿ ಮಗುವನ್ನು ಸಾಗಹಾಕಿದ.

ಕೆಲವೇ ಕ್ಷಣಗಳಲ್ಲಿ ಆ ಮಗುವು ಓಡಿ ಬಂದು ಗುರುವಿಗೆ, ''ಗುರುಗಳೇ, ನನ್ನ ಕೈಯಲ್ಲಿ ವಿದ್ಯಾರೇಖೆ ಇದೆ ನೋಡಿ'' ಎಂದು ತನ್ನ ಕೈಯನ್ನು ತೋರಿಸಿತು. ಅದರ ಮೊಗದಲ್ಲಿ ಆನಂದ ತುಂಬಿದೆ. ಕೈಯಿಂದ ರಕ್ತ ಸೋರುತ್ತಿದೆ. ಕೈಯಲ್ಲಿ ಮುಳ್ಳಿನಿಂದ ಗುರುವಿನ ಕೈಯಲ್ಲಿದ್ದಂತೆ ರೇಖೆಯೊಂದನ್ನು ಬರೆದುಕೊಂಡು ಬಂದಿದೆ. ಈಗ ಅಳುವ ಸರದಿ ಗುರುವಿನದಾಯಿತು. ಮಗುವನ್ನು ಬಾಚಿ ತಬ್ಬಿಕೊಂಡು ಗುರು ಹೇಳಿದ, ''ಮಗು, ವಿದ್ಯೆಯೆಂಬುದು ನಿನ್ನಂತಹವರಿಗಲ್ಲದೇ ಮತ್ತಾರಿಗೂ ಒಲಿಯದು. ಇಂದಿನಿಂದ ನೀನು ನನ್ನ ಶಿಷ್ಯ.''

ಇದು ತಮಿಳುನಾಡಿನ ಪ್ರಸಿದ್ಧ ವ್ಯಕ್ತಿಯೊಬ್ಬರ ಕತೆ ಎಂಬ ಅಭಿಪ್ರಾಯವಿದೆ. ಈ ಕತೆ ಮಾತ್ರ ಬಹಳ ವಿಚಾರಯೋಗ್ಯವಾಗಿದೆ. ಸ್ವಾಮಿ ವಿವೇಕಾನಂದರ ಪ್ರಕಾರ ಎಲ್ಲವೂ ನಮ್ಮ ಕೈಯಲ್ಲಿದೆ. ನಾವೇ ನಮ್ಮ ಭವಿಷ್ಯದ ರೂವಾರಿಗಳು. ನನಗೆ ಹಸಿವಾದಲ್ಲಿ ನಾನು ಊಟಮಾಡಬೇಕೇ ಹೊರತು, ಪಕ್ಕದವ ಊಟಮಾಡಿದರೆ ಅಲ್ಲ. ಅಂದ ಮೇಲೆ ನಾನೆ ನನಗೆ ಮಿತ್ರ, ನನಗೆ ನಾನೇ ಶತ್ರು. ಭಗವದ್ಗೀತೆಯ ಶ್ಲೋಕವೊಂದು ಹೇಳುವಂತೆ, ಒಬ್ಬ ವ್ಯಕ್ತಿ ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕು; ತನಗೆ ತಾನೇ ಶತ್ರು, ತನಗೆ ತಾನೇ ಮಿತ್ರ. ಮುಂದುವರಿದು ಆ ಶ್ಲೋಕದಲ್ಲಿಯೇ ಹೇಳುವಂತೆ, ಯಾರು ಮನಸ್ಸನ್ನು ಗೆದ್ದಿರುತ್ತಾರೋ ಅವರಿಗೆ ಮನಸ್ಸೇ ಗುರುವಾಗಿ ಉತ್ತಮ ಮಾರ್ಗವನ್ನು ತೋರಿಸಿದರೆ, ಮನಸ್ಸಿನ ಅಡಿಯಾಳಾಗಿ ಅದು ಹೇಳಿದಂತೆ ಕೇಳುವ ದುರ್ಬಲನಿಗೆ ಅದು ವಿನಾಶದ ಹಾದಿಯನ್ನು ತೋರುತ್ತದೆ.


ಈ ಕಥೆಯಲ್ಲಿ ಬರುವಂತೆ ಗುರುವು ತೋರುವ ತನ್ನ ಕೈರೇಖೆ ದೈವದತ್ತವಾದದ್ದು ಎಂದು ನಂಬಿಕೊಂಡರೂ, ಆತ ಶ್ರಮಪಡದೆ, ತನ್ನ ಜೀವನದಲ್ಲಿ ಏರಿಳಿತಗಳನ್ನು ಕಾಣದೆ ತನ್ನ ಪ್ರಸ್ತುತ ಮಟ್ಟಕ್ಕೆ ಬಂದಿರಲಾರ. ಆದರೆ ವಿದ್ಯಾರ್ಥಿಯಾಗಿ ಬಂದ ಆ ಮಗು, ತಾನೇ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಬಲ್ಲೆ ಎಂದು ತೋರಿಸಿದ. ಸ್ವಾಮಿ ವಿವೇಕಾನಂದರು ಹೇಳುವಂತೆ, **ಹಿಂದಿನ ಧರ್ಮಗಳು ಯಾರಿಗೆ ಭಗವಂತನಲ್ಲಿ ನಂಬಿಕೆಯಿಲ್ಲವೋ ಅವನು ನಾಸ್ತಿಕನೆಂದು ಹೇಳುತ್ತಿದ್ದವು. ಆದರೆ, ನವಯುಗ ಧರ್ಮವು ಯಾರಿಗೆ ತನ್ನಲ್ಲಿ ತನಗೆ ನಂಬಿಕೆಯಿಲ್ಲವೋ ಅವನು ನಾಸ್ತಿಕ ಎನ್ನುತ್ತದೆ.** ಇದು ಇಂದಿನ ನೂತನ ಧರ್ಮದ ಮೂಲ ಮಂತ್ರ, ಸ್ವಾಮೀಜಿಯವರಿಂದ ಯುವಕರಿಗಾಗಿ.

## ನನ್ನ ಜೀವನ ರೂಪಿಸಿಕೊಳ್ಳಬೇಕಾದವನು ನಾನೇ

ಭಗವಂತ ನಮ್ಮ ಹಣೆಯ ಬರಹ ಈ ರೀತಿ ಬರೆದಿದ್ದಾನೆ, ನಾವೇನು ಮಾಡುವುದು. ಇದು ನನ್ನ ಅದೃಷ್ಟ, ಹಣೆಬರಹ ಎಂದು ನರಳಾಡುವುದನ್ನು ಬಹಳಷ್ಟು ಜನರ ಮಾತಿನಲ್ಲಿ ಕೇಳಬಹುದು. ಇದು ಕೇವಲ ಕೈಲಾಗದವರ ಮತ್ತು ಶುದ್ಧ ಸೋಂಬೇರಿಗಳ ಮಾತು ಎಂಬುದು ಸ್ವಾಮಿ ವಿವೇಕಾನಂದರ ನಂಬಿಕೆ. ಸ್ವಾಮೀಜಿ ಹೇಳುವಂತೆ,'You can do anything and everything. Feel that you are not body but Soul'(ನೀನು ದೇಹವಲ್ಲ ಆತ್ಮನೆಂದು ಭಾವಿಸು, ನೀನು ಏನನ್ನು ಬೇಕಾದರೂ ಸಾಧಿಸಬಲ್ಲೆ). ನಮ್ಮ ಜೀವನ ಪುಸ್ತಕದಲ್ಲಿ, ದೇವರು ಕೇವಲ ನಮ್ಮ ಹುಟ್ಟು ದಿನಾಂಕ ಮತ್ತು ಮರಣದ ದಿನಾಂಕ ಬರೆದು ಮಧ್ಯದಲ್ಲಿ ಖಾಲಿ ಹಾಳೆಗಳನ್ನಿಟ್ಟು ಲೇಖನಿಯನ್ನು ನಮ್ಮ ಕೈಯಲ್ಲಿ ಕೊಟ್ಟಿರುತ್ತಾನೆ. ಅದರಲ್ಲಿ ನಾನೇನು ಆಗಬೇಕು ಎಂಬುದನ್ನು ನಾವೇ ಬರೆದುಕೊಳ್ಳಬೇಕು. ಆದರೆ ನಾವು ಸದಾ ಒಂದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಈ ಜೀವನ ಪುಸ್ತಕದಲ್ಲಿ ನಮಗೆ ಕೇವಲ ಬರೆಯುವ ಹಕ್ಕು ಇದೆಯೇ ಹೊರತು, ಅಳಿಸಲು ಇಲ್ಲ. ಆದ್ದರಿಂದ ಬರೆಯುವ ಮುನ್ನ ಹಲವು ಬಾರಿ ಯೋಚಿಸಿ, ಮರಳಿ ಚಿಂತಿಸಿ ಬರೆಯಬೇಕು.

ತಪ್ಪು ಮಾಡುವುದು ಸುಲಭ, ಆದರೆ ತಿದ್ದಿಕೊಳ್ಳುವುದು ಬಹಳ ಕಷ್ಟ. ನಮ್ಮ ಆಸೆ ನಮ್ಮನ್ನು ಪ್ರಚೋದಿಸುತ್ತವೆ, ಪ್ರಚೋದನೆಯು ಕರ್ಮಕ್ಕೆ ಆಗ್ರಹಿಸುತ್ತದೆ, ಕರ್ಮವು ಅನುಭವ ಮತ್ತು ಅನುಭವವು ಸಂಸ್ಕಾರವನ್ನುಂಟು ಮಾಡುತ್ತದೆ. ಅದೇ ಆಲೋಚನೆ ಅಥವಾ ಆಸೆಗೆ ಮೂಲವಾಗುತ್ತದೆ. ಇದೇ ನಮ್ಮ 'ವ್ಯಕ್ತಿತ್ವ'. ಇದಕ್ಕೆ ಕಾರಣ ನಮ್ಮ ಆಸೆ ಅಥವಾ ಬಯಕೆಗಳು. ಇದು ಯೌವನದಲ್ಲಿ, ನಮ್ಮ ಆಲೋಚನಾ ಶಕ್ತಿ ಇನ್ನೂ ಸರಿಯಾಗಿ ಬೆಳೆಯದ ಕಾಲದಲ್ಲಿ ನಮ್ಮನ್ನು ತಪ್ಪು ದಾರಿಗೆ ತಳ್ಳುತ್ತವೆ.

ಆಸೆಯೇ ನಮ್ಮನ್ನ ಸಂಸಾರಕ್ಕೆ ಬಂಧಿಸುತ್ತದೆ ಎಂದಾಯಿತು. ಈ ಆಸೆಯೆಂಬುದು ಕರ್ಮಕ್ಕೆ, ಕರ್ಮವೆಂಬುದು ಅನುಭವಕ್ಕೆ, ಅನುಭವವೆಂಬುದು ಸಂಸ್ಕಾರಕ್ಕೆ, ಸಂಸ್ಕಾರವೆಂಬುದು ಮತ್ತೆ ಆಸೆಗೆ ದಾರಿಮಾಡಿಕೊಡುತ್ತವೆ.




ಆಸೆಯಿಂದ ಆಸೆಗೆ ನಮ್ಮನ್ನು ತಿರುಗಿಸುವುದು ಮತ್ತು ಈ ಜೀವನ ಚಕ್ರವನ್ನು ಹೇಗೆ ತುಂಡರಿಸುವುದು ಎಂಬುದೇ ಪ್ರಶ್ನೆ. ಇಲ್ಲಿ ಸಂಸ್ಕಾರವನ್ನಾಗಲಿ ಅಥವಾ ಅನುಭವವನ್ನಾಗಲಿ ಬದಲಾಯಿಸಲು ಅಸಾಧ್ಯ. ಆದರೆ ಕರ್ಮವನ್ನು ನಾವು ಬದಲಾಯಿಸಬಹುದು. ಸ್ವಾಮಿ ವಿವೇಕಾನಂದರು ಹೇಳುವಂತೆ, **'ಇಂದು ನಾವು ಏನಾಗಿದ್ದೇವೊ ಅದಕ್ಕೆ**

**ಕಾರಣ ನಮ್ಮ ಕರ್ಮ.**' ನಮ್ಮ ಕರ್ಮವನ್ನು ಬದಲಾಯಿಸುವುದರಿಂದ ಮತ್ತು ನಾವು ನಾಳೆ ಏನಾಗಬೇಕೆಂದು ಬಯಸಿದ್ದೇವೆಯೋ ಅದಕ್ಕೆ ತಕ್ಕುದಾದ ಕರ್ಮವನ್ನು ಮಾಡುವುದರಿಂದ ನಾವು ನಮ್ಮ ಭವಿಷ್ಯವನ್ನು ಬದಲಾಯಿಸಬಹುದು. ಕರ್ಮವೆಂಬುದು ನಮ್ಮನ್ನು ಈ ಜಗತ್ತಿಗೆ ಬಂಧಿಸುವುದರಲ್ಲಿ ಎರಡು ಮಾತಿಲ್ಲ. ಆದರೆ ಶ್ರೀರಾಮಕೃಷ್ಣರು ಹೇಳುವಂತೆ ''ಸತ್ಕರ್ಮವೆಂಬುದು ಚಿನ್ನದ ಸರಪಳಿಯಿದ್ದಂತೆ, ಅದನ್ನು ತುಂಡರಿಸುವುದು ತುಂಬಾ ಸುಲಭ.'' ಅದನ್ನು ವಿವೇಚಿಸಿ ಶಾಶ್ವತವಾದ ಮತ್ತು ನಿತ್ಯಾನಂದಭರಿತವಾದ ವಸ್ತುವನ್ನು ಪಡೆಯಲು ಸತ್ಕರ್ಮ ವನ್ನು ಆಚರಿಸಿದರೆ ಅದು ಸಂಸ್ಕಾರ ರೂಪದಿಂದ ನಮ್ಮನ್ನು ಉತ್ತಮ ಅಭ್ಯಾಸ ಮತ್ತು ಅನುಭವದೆಡೆಗೆ ಕರೆದೊಯ್ಯುತ್ತದೆ. ವಿವೇಚನೆ ಮಾತ್ರ ನಮಗೆ ಬಿಟ್ಟದ್ದು. ಇರುವ ವಿವೇಕದಿಂದ ನಾವು ನಾವು ನಡೆವ ದಾರಿಯನ್ನು ಆಯ್ದುಕೊಳ್ಳಬೇಕು. ಭಗವ ದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ, ಮೊದಲು ಅಮೃತದಂತೆ ಕಂಡದ್ದು ಕೊನೆಯಲ್ಲಿ ವಿಷವಾಗುತ್ತದೆ ಮತ್ತು ಮೊದಲು ವಿಷ ದಂತೆ ಕಂಡದ್ದು ಕೊನೆಯಲ್ಲಿ ಅಮೃತವಾಗುತ್ತದೆ ಎಂದು.

ಮತ್ತೊಬ್ಬರು ನಮಗೆ ಸಹಾಯವನ್ನು ಮಾಡುತ್ತಾರೆಂಬುದು ಸುಳ್ಳು. ಅವರು ಸಲಹೆಗಳನ್ನು ನೀಡಬಹುದು ಅಥವಾ ತಿಳಿವಳಿಕೆ ಹೇಳಬಹುದು. ಮರ ಹತ್ತಿಸುವುದು ಕೈಗೆ ಸಿಗುವ ವರೆಗಲ್ಲದೆ ಮತ್ತೇನು? ಇತರರು ಹೇಳಿದ್ದನ್ನು ನಾವು ಆಚರಣೆಗೆ ತಂದರೆ ನಮಗೆ ಅನುಕೂಲವಷ್ಟೆ. ಉದಾಹರಣೆಗೆ ಒಂದು ಶಾಲೆಯಲ್ಲಿ, ಒಬ್ಬ ಮಾಸ್ತರರು ಒಂದು ಪಾಠವನ್ನು ಸುಮಾರು ೬೦ ವಿದ್ಯಾರ್ಥಿಗಳಿಗೆ, ಒಂದೇ ಸಮಯದಲ್ಲಿ ಹೇಳಿಕೊಟ್ಟರೂ ಅದನ್ನು ಕೇಳಿದ ೬೦ ವಿದ್ಯಾರ್ಥಿಗಳು ಒಂದೇ ರೀತಿಯಾಗಿ ಅರ್ಥಮಾಡಿಕೊಳ್ಳಲಾರರು ಮತ್ತು ಎಲ್ಲರೂ ಒಂದೇ ಶ್ರೇಣಿಯಲ್ಲಿ ಉತ್ತೀರ್ಣರಾಗರು. ಕಾರಣ : ಅವರು ಹೇಳಿದ್ದನ್ನು ಕೇಳಿ, ತನ್ನಲ್ಲಿ ಆಲೋಚಿಸಿ, ಕಲಿತ ವಿದ್ಯಾರ್ಥಿ ತಾನು ಮೊದಲ ಸ್ಥಾನದಲ್ಲೂ, ಆಟವಾಡುತ್ತಾ ಅಥವಾ ಹಿಂದಿನ ಸಾಲಿನಲ್ಲಿ ನಿದ್ದೆ ಮಾಡುತ್ತಿದ್ದವ ಕೆಳಗಿನ ಸ್ಥಾನದಲ್ಲೂ ಉತ್ತೀರ್ಣರಾಗಬಹುದು ಅಥವಾ ನಪಾಸು ಆಗಬಹುದು. ಇದರ ಅರ್ಥವಿಷ್ಟೇ: ನಾವೇ ನಮ್ಮನ್ನು ಬೆಳೆಸಿಕೊಳ್ಳಬೇಕು. ಸ್ವಾಮೀಜಿ ಹೇಳುವಂತೆ, ವಿದ್ಯೆಯೆಂಬುದು ಈಗಾಗಲೇ ನಮ್ಮಲ್ಲಿರುವ ಪರಿಪೂರ್ಣತೆಯನ್ನು ವ್ಯಕ್ತಗೊಳಿಸುವುದು. ಅದು ಹೊರಗಿನಿಂದ ಬಂದದ್ದಲ್ಲ.

### ಬಯಕೆಯ ಬಲೆ

ಬಯಕೆ ಅಥವಾ ಆಸೆಯೆಂಬುದು ಸಾಮಾನ್ಯ. ಅದು ನಮ್ಮ ಕೈಯಲ್ಲಿರಬೇಕೇ ಹೊರತು ಅದರ ಕೈಯಲ್ಲಿ ನಾವಿರಬಾರದು. ಕುದುರೆಯ ಮೇಲೆ ನಾವಿರಬೇಕು, ಕುದುರೆ ನಮ್ಮ ಮೇಲಲ್ಲ. ನಾಯಿ ತನ್ನ ಬಾಲವನ್ನಾಡಿಸಿದರೆ ಚಂದ, ಬಾಲವೇ ನಾಯಿಯನ್ನು ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಎತ್ತಿ ಆಡಿಸುತ್ತಿದ್ದರೆ ನೋಡುವವರಿಗೆ ಹೇಗಾದೀತು? ನಮ್ಮ ಬಯಕೆ ನಮ್ಮ ಕೈಯಲ್ಲಿರಬೇಕು. ಒಂದು ಕತೆ ಹಿಂದಿಯಲ್ಲಿ 'ಕಂಬಲ್ ಛೋಡ್ತಾ ನಹಿ' ಎಂದು ಇದೆ, ನೋಡೋಣ.

ಒಮ್ಮೆ ಇಬ್ಬರು ಸ್ನೇಹಿತರು ಗಂಗಾನದಿಯ ತಟದಲ್ಲಿ ನಡೆದು ಹೋಗುತ್ತಿದ್ದರು. ಅದು ಚಳಿಗಾಲ. ಇಬ್ಬರೂ ಚಳಿಯಿಂದ ನಡುಗುತ್ತಿದ್ದಾರೆ. ಆಗ ಒಬ್ಬ ಗಂಗೆಯಲ್ಲಿ ತೇಲಿ ಹೋಗುತ್ತಿದ್ದ ಕಂಬಳಿಯೊಂದನ್ನ ನೋಡಿ, ಇನ್ನೊಬ್ಬ ಸ್ನೇಹಿತನಿಗೆ ಹೇಳಿದ, ''ನೋಡಲ್ಲಿ, ಕಂಬಳಿಯೊಂದು ತೇಲುತ್ತಾ ಇದೆ. ನಿನಗೆ ಈಜುವುದು ಗೊತ್ತು, ಹೋಗಿ ತೆಗೆದುಕೊಂಡು ಬಾ. ಒಣಗಿಸಿ ಹೊದ್ದುಕೊಂಡರೆ ಬೆಚ್ಚಗಿರುತ್ತದೆ'' ಎಂದ. ಆ ಸ್ನೇಹಿತ ಒಂದೇ ಬಾರಿಗೆ ನದಿಗೆ ಹಾರಿ, ಕಂಬಳಿಯನ್ನು ಹಿಡಿದು ದಡಕ್ಕೆ ಎಳೆಯುತ್ತಾ ಬಂದ. ಅದು ಸ್ವಲ್ಪ ಭಾರವಾಗಿತ್ತು. ದಡದಲ್ಲಿದ್ದ ಸ್ನೇಹಿತ ನೋಡುತ್ತಿದ್ದಾನೆ, ನದಿಯ ಪ್ರವಾಹಕ್ಕೆ ಕಂಬಳಿ ಸ್ನೇಹಿತನನ್ನು ನೀರಿಗೆ ಎಳೆಯುತ್ತಿತ್ತು. ಆತ ತನ್ನ ಶಕ್ತಿಯನ್ನೆಲ್ಲಾ ಬಿಟ್ಟು ಎಳೆದರೂ ಅದು ಈತನನ್ನು ನೀರಿಗೆ ಎಳೆಯುವುದನ್ನು ಬಿಡುತ್ತಿಲ್ಲ. ಅಷ್ಟರಲ್ಲಿ ಆತನಿಗೆ ತುಂಬಾ ಆಯಾಸವಾಗಿ ಏದುಸಿರು ಬಿಡುತ್ತಿದ್ದನ್ನು ಕಂಡ ದಡದಲ್ಲಿದ್ದ ಸ್ನೇಹಿತ ಹೇಳಿದ, ''ಯಾಕೆ? ಏನಾಯ್ತು? ಹೀಗೆ ನೀನು ದಡಕ್ಕೆ, ಆ ಕಂಬಳಿ ನೀರಿಗೆ ಎಳೆದಾಡುತ್ತಿದ್ದರೆ ನನಗೆ ಇಬ್ಬರೂ ದೊರಕಲಾರಿರಿ. ಆ ಕಂಬಳಿಯನ್ನು ಬಿಟ್ಟುಬಿಡು. ನೀನಾದರೂ ತಿರುಗಿ ಬಾ.'' ಆಗ ಆ ನೀರಿನಲ್ಲಿದ್ದ ಸ್ನೇಹಿತ ಹೇಳಿದ, ''ಗುರೂ, ನಾನು ಆ ಕಂಬಳಿಯನ್ನ ಬಿಟ್ಟಿದ್ದೇನೆ, ಅದು ನನ್ನ ಬಿಡುತ್ತಿಲ್ಲ. ಅದು ಕಂಬಳಿಯಲ್ಲ, **ಕರಡಿ**!''

ಹೀಗೆ ನಮ್ಮ ಜೀವನದಲ್ಲೂ ನಾವು ಪಡೆದು ಅನುಭವಿಸುತ್ತೇವೆ ಎಂದುಕೊಂಡಿರುವ ಆಸೆಗಳು, ಚಳಿಯಲ್ಲಿ ಆವಶ್ಯಕವಾದ ಕಂಬಳಿಯಂತೆ ಕಂಡರೂ ಅವು ನಮ್ಮನ್ನು ಪಾತಾಳಕ್ಕೊಯ್ಯುವ ಕರಡಿಗಳಂತೆ. ಮುಟ್ಟುವ ಮುಂಚೆಯೇ ಯೋಚಿಸಬೇಕು.

### ಪ್ರಯತ್ನವೇ ಪರಮೇಶ್ವರ

ಪ್ರಯತ್ನವೆಂಬುದು ನಮ್ಮ ಹುಟ್ಟುಗುಣ. ೯೯% ನಮ್ಮ ಪ್ರಯತ್ನ ೧% ದೈವ ಕೃಪೆ. ಆಗಲೇ ಅದು ೧೦೦% ಆಗುವುದು. ಆಲಸ್ಯದಿಂದ ಮಲಗಿರುವ ಸಿಂಹದ ಬಾಯಿಯಲ್ಲಿ ಯಾವುದೇ ಪ್ರಾಣಿಗಳು ಬಂದು ತಾವಾಗಿ ಬೀಳಲಾರವು ಎಂದು ಒಂದು ಸಂಸ್ಕೃತ ಶ್ಲೋಕವು ಹೇಳುತ್ತದೆ. ದೈವಕೃಪೆಯೆಂಬುದು ನಮ್ಮ ಹಿಂದಿನ ಜನ್ಮದ ಪ್ರಯತ್ನದ ಇನ್ನೊಂದು ರೂಪವಷ್ಟೇ. ಯಾರು ತನಗೆ ತಾನೇ ಸಹಾಯ ಮಾಡಿಕೊಳ್ಳಬಲ್ಲನೋ ಅವನಿಗೆ ದೇವರು ಸಹಾಯ ಮಾಡುತ್ತಾನೆ ಎಂಬುದು ಸತ್ಯವಾದರೂ, ದೈವವೆಂಬುದು ಕೇವಲ ನಮ್ಮ ಬೆನ್ನ ಹಿಂದಿನ ನಮ್ಮದೇ ಆತ್ಮವಷ್ಟೇ. ನಮ್ಮ ಮೇಲಿನ ನಂಬಿಕೆ ನಮಗೆ ಸಹಾಯವಾಗಿ ನಿಲ್ಲುತ್ತದೆ. ಸ್ವಾಮೀಜಿ ಹೇಳುವಂತೆ, ''ನಂಬಿಕೆ, ನಂಬಿಕೆ, ನಿನ್ನಲ್ಲಿ ನಿನಗೆ

ನಂಬಿಕೆ; ನಂಬಿಕೆ, ದೈವದಲ್ಲಿ ನಂಬಿಕೆ.'' ಇಲ್ಲಿ ಸ್ವಾಮೀಜಿ ನಂಬಿಕೆ ಎಂಬ ಪದವನ್ನು ನಿನ್ನಲ್ಲಿ ಎಂಬಲ್ಲಿ ೩೩ ಬಾರಿ ಮತ್ತು ದೈವದಲ್ಲಿ ಎಂಬಲ್ಲಿ ೨ ಬಾರಿ ಉಪಯೋಗಿಸಿದ್ದಾರೆ. ಅಂದರೆ ನಂಬಿಕೆ ಮೊದಲು ನಮ್ಮಲ್ಲಿ ನಮಗಿರಬೇಕು. ನಮ್ಮಲ್ಲಿ ನಮಗೆ ನಂಬಿಕೆ ಇಲ್ಲದಿದ್ದಲ್ಲಿ ೩೩ ಕೋಟಿ ದೇವರು ಬಂದರೂ ನಮಗೆ ಅದರಿಂದ ಉಪಯೋಗವಿಲ್ಲ. ಇದನ್ನು ನಾವು ಎಲ್ಲ ಮಹಾತ್ಮರ ಜೀವನದಲ್ಲಿ ಕಾಣಬಹುದು.

### ಸ್ವಾಮೀಜಿಯವರ ನಂಬಿಕೆ

ಒಮ್ಮೆ ತಮ್ಮ ಭಾರತ ಪರಿಕ್ರಮಣದ ಕಾಲದಲ್ಲಿ ಸ್ವಾಮೀಜಿಯವರು ಒಂದು ಹಳ್ಳಿಯಲ್ಲಿ ತಂಗಿದ್ದರು. ಎಲ್ಲಾ ಸ್ಥಳಗಳಂತೆ ಅಲ್ಲಿಯೂ ಕೂಡ ಅವರ ಬಳಿಗೆ ಅನೇಕ ಜನರು ಬರುತ್ತಿದ್ದರು. ಅವರಲ್ಲಿ ಒಬ್ಬ ಮುದುಕ ಕೂಡ ಇದ್ದ. ದಿನವೂ ಸ್ವಾಮೀಜಿಯವರನ್ನು, ''ಮಹಾರಾಜ್, ಉಪದೇಶ ನೀಡಿ'' ಎಂದು ಕೇಳುವುದು ಮತ್ತು ಯಾವುದನ್ನೂ ಪಾಲಿಸದಿರುವುದು ಅವನ ಕೆಲಸವಾಗಿತ್ತು. ಸ್ವಾಮೀಜಿಯವರು ಇದನ್ನು ಗಮನಿಸಿದರು. ಒಂದು ದಿನ ಆತ ಬಂದು, 'ಉಪದೇಶ ನೀಡಿ' ಎಂದು ಬೇಡಿಕೊಂಡಾಗ ಸ್ವಾಮೀಜಿ ಏನನ್ನೂ ಮಾತನಾಡದೆ, ಸುಮಾರು ಹೊತ್ತು ಮೌನದಿಂದ ಕುಳಿತಿದ್ದರು. ಬಹಳ ಹೊತ್ತು ಕಾದು ಬೇಸತ್ತ ಆ ಮುದುಕ ಸ್ವಾಮೀಜಿಯವರ ಈ ಮೌನದಿಂದ ಕೋಪಗೊಂಡು, ಬೈಯುತ್ತಾ ಹೊರಟು ಹೋದ. ಆತ ಹೋದ ನಂತರ ಅಲ್ಲಿಯವರೆಗೆ ಮೌನದಿಂದಿದ್ದ ಸ್ವಾಮೀಜಿಯವರು ಜೋರಾಗಿ ನಗಲಾರಂಭಿಸಿದರು. ಆಗ ಅಲ್ಲಿದ್ದ ಯುವಕರು ಅವರನ್ನು ಕಾರಣ ಕೇಳಿದಾಗ, ''ನಾನು ನಿಮಗಾಗಿ ೧೦೦೦ ಜನ್ಮವನ್ನೂ ನೀಡಲು ಸಿದ್ಧ. ಈ ಮುದುಕ ತನ್ನ ಜೀವನವನ್ನೆಲ್ಲಾ ಭೋಗದಲ್ಲಿ ಕಳೆದು, ಈಗ ತಾನು ಯಾವುದೇ ಕೆಲಸವನ್ನು ಮಾಡಲು ಅಶಕ್ತನಾದಾಗ ಇಲ್ಲಿಗೆ ಬಂದಿದ್ದಾನೆ. ಕೇಳುವುದೂ ಇಲ್ಲ, ಹೇಳಿದ್ದನ್ನು ಮಾಡಲು ಶಕ್ತಿಯೂ ಇಲ್ಲ. ಆದರೆ ನಿಮ್ಮಲ್ಲಿ ಮಾಡುವ ಮತ್ತು ಕೇಳಿದ್ದನ್ನು ಅರಗಿಸಿಕೊಳ್ಳುವ ಶಕ್ತಿಯಿದೆ '' ಎಂದರು. ಅದರಂತೆ ಸ್ವಾಮೀಜಿಯವರು ಯುವಕರಿಗಾಗಿ ತಮ್ಮ ಜೀವನದ ಪ್ರತಿಯೊಂದು ಉಸಿರನ್ನು, ರಕ್ತದ ಕಣ ಕಣವನ್ನೂ ಬಸಿದರು. ಅವರು ಆಗಾಗ ಹೇಳುತ್ತಿದ್ದ ವಾಕ್ಯವು ಅವರು ಯುವಕರಲ್ಲಿಟ್ಟಿದ್ದ ನಂಬಿಕೆಯನ್ನು ತೋರಿಸುತ್ತದೆ: ''ನನ್ನ ನಂಬಿಕೆಯು ಆಧುನಿಕ ಯುವಜನತೆಯಲ್ಲಿದೆ. ಅಲ್ಲಿಂದ ನನ್ನ ಯುವಕರು ಬಂದು ಎಲ್ಲಾ ತೊಂದರೆಗಳನ್ನು ಸಿಂಹಗಳಂತೆ ನಿವಾರಿಸುತ್ತಾರೆ.''

### ಸ್ವಾಮೀಜಿಯವರ ಆಶೀರ್ವಾದ

ಸ್ವಾಮೀಜಿಯವರ ಶಕ್ತಿ ನಮ್ಮೊಡನೆ ಸದಾ ಸಹಾಯಕ್ಕಾಗಿ ಇದೆ. ತಮ್ಮ ಕೊನೆಯ ಕಾಲದಲ್ಲಿ ಅವರು ಹೇಳಿದ ಮಾತು ಇದು: ''ನಾನು ನನ್ನ ಶರೀರವನ್ನು ಒಂದು ಹಳೆಯ ಬಟ್ಟೆಯಂತೆ ಒಗೆದು ಬಿಡುತ್ತೇನೆ. ಆದರೆ, ಪ್ರತಿಯೊಂದು ಜೀವಿಯೂ ತಾನು ಆ ಪರಬ್ರಹ್ಮವೇ ಆಗಿದ್ದೇನೆ ಎಂಬುದನ್ನು ಅರಿಯುವವರೆಗೆ ಜನರನ್ನು ಉತ್ತೇಜಿತರನ್ನಾಗಿ ಮಾಡುವ ನನ್ನ ಕಾರ್ಯದಿಂದ ವಿಮುಖನಾಗಲಾರೆ.''

ಈ ಜಗತ್ತಿಗೆ ಬರುವ ಪ್ರತಿಯೊಂದು ಪ್ರಾಣಿಯೂ ಜೀವಿಸುತ್ತದೆ. ಆದರೆ ಮನುಷ್ಯ ಮಾತ್ರವೇ ಜೀವನವನ್ನು ನಡೆಸುವವ. ಅಂತಹದ್ದರಲ್ಲಿ ಜೀವನದಲ್ಲಿ ಏನೊಂದನ್ನಾದರೂ ಸತ್ಕಾರ್ಯವನ್ನು ಮಾಡಿ, ಯಶಸ್ಸನ್ನು ಗಳಿಸದೆ ಹೋದರೆ ಜೀವನದ ಉದ್ದೇಶವೇ ನಿರರ್ಥಕವಲ್ಲವೆ? ''ನಿಮ್ಮ ಜೀವನದಲ್ಲಿ ದೇಶಕ್ಕೆ ಅನುಕೂಲವಾಗುವಂತಹ ಕಾರ್ಯವನ್ನು ಮಾಡಿ, ಒಂದು (ಆದರ್ಶದ) ಗುರುತನ್ನು ನಿಮ್ಮ ಹಿಂದೆ ಬಿಡಿ'' ಎಂಬ ಆದರ್ಶವನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದೆ ನಡೆಯಲು ಸ್ವಾಮೀಜಿಯವರ ಕೃಪಾಶೀರ್ವಾದವಿದೆ. ನಮ್ಮ ಶಾಸ್ತ್ರಗಳು ನಾವು ಅಜ್ಞಾನದ ಈ ಕತ್ತಲೆಯಿಂದ ಹೊರಬರಲು 'ಮಂಗಳವಾಗಲಿ. ಸಾರ್ಥಕ

## ಶ್ರೀಮಾತೆಯವರ ಉಪದೇಶಗಳು



❁ ಜಪ, ಲೆಕ್ಕವಿಡುವುದು, ಕೈಯಲ್ಲಿ ಎಣಿಸುವುದು — ಇವೆಲ್ಲ ಮನಸ್ಸನ್ನು ಹತೋಟಿಗೆ ತರಲು ಮಾತ್ರ. ಮನಸ್ಸು ಅತ್ತ ಇತ್ತ ಹೋಗ ಬಯಸುತ್ತದೆ; ಆದರೂ ಇವೆಲ್ಲವನ್ನೂ ಮಾಡುವ ಮೂಲಕ ಅದನ್ನು ಇತ್ತ ಸೆಳೆಯಲು ಸಾಧ್ಯ. ಯಾವಾಗ ಜಪ ಮಾಡುತ್ತ ಭಗವಂತನ ರೂಪದ ದರ್ಶನವಾಗುವುದೋ, ಯಾವಾಗ ಧ್ಯಾನ ಸಾಧ್ಯವಾಗುವುದೋ ಆಗ ಜಪವೂ ನಡೆಯಲಾರದು. ಧ್ಯಾನ ಸಾಧ್ಯವಾದರೆ ಎಲ್ಲವೂ ಆದಂತೆ.

❁ ಮನಸ್ಸು ಚಂಚಲವಾಗಿರುತ್ತದೆ. ಆದ್ದರಿಂದ ಮೊದಲಿಗೆ ಮನಸ್ಸನ್ನು ಸ್ಥಿರಗೊಳಿಸಲು ತುಸು ಶ್ವಾಸವನ್ನು ನಿಯಮಿತಗೊಳಿಸಿ, ಧ್ಯಾನ ಮಾಡಲು ಪ್ರಯತ್ನಿಸಬೇಕು. ಅದು ಮನಸ್ಸು ಸ್ಥಿರವಾಗಲು ಸಹಾಯ ಮಾಡುವುದು. ಆದರೆ ಅತಿಯಾಗಿ ಹಾಗೆ ಮಾಡಬಾರದು ; ಅದರಿಂದ ತಲೆ ಬಿಸಿಯಾಗುವುದು. ಭಗವಂತನ ದರ್ಶನವೇ ಆಗಲಿ, ಧ್ಯಾನವೇ ಆಗಲಿ ಎಲ್ಲವೂ ಮನಸ್ಸನ್ನೇ ಅವಲಂಬಿಸಿದೆ. ಮನಸ್ಸು ಸ್ಥಿರವಾದರೆ ಎಲ್ಲವೂ ಸಾಧ್ಯವಾಗುವುದು.

'ಶ್ರೀಶಾರದಾದೇವಿ ವಚನವೇದ' ದಿಂದ, ಪು.೨೭೧